ಕರ್ನಾಟಕ ವಿಧಾನ ಸಭೆ

KARNATAKA LEGISLATIVE ASSEMBLY

ಸೋಮವಾರ ೨೩ನೇ ಮಾರ್ಚ್ ೧೯೮೭ ಚೈತ್ರ ಶು. ೧೯೦೯ಶಕ

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಮಧ್ಯಾಹ್ನ ೧೧-೧೮ ಗಂಟೆಗೆ ಸಮಾವೇಶಗೊಂಡಿತು

[ಅಧ್ಯಕ್ಷರು ಶ್ರೀ ಬಿ. ಜಿ. ಬಣಕಾರ್ (ಆವರು ಪೀಠವನ್ನು ಅಲಂಕರಿಸಿದರು)]

ಸಂತಾಪ ಸೂಚನೆ

ಅಧ್ಯಕ್ಷರು.—ಮಾಜಿ ಶಾಸಕರಾದ ಶ್ರೀ ಟಿ. ತಾರೇಗೌಡರವರು ದಿನಾಂಕ ೨೦-೩-೧೯೮೭ ರಂದು ನಿಧನರಾದರೆಂದು ಈ ಸಭೆಗೆ ತಿಳಿಸಲು ವಿಷಾಧಿಸುತ್ತೇನೆ. ಶ್ರೀಯುತರು ೧೯೪೫ ರಿಂದ ೧೯೪೯ರ ವರೆಗೆ ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರಾಗಿದ್ದರು. ೧೯೫೭ ರಿಂದ ೧೯೬೨ರ ವರೆಗೆ ಹಾಗೂ ೧೯೭೨ ರಿಂದ ೧೯೭೨ರ ವರೆಗೆ ವಿಧಾನ ಸಭಾ ಸದಸ್ಯರಾಗಿದ್ದರು. ಮಾನ್ಯರು ಸ್ವಾತಂತ್ರ್ಯ ಹೋರಾಟದಲ್ಲಿ ಸಕ್ರೀಯವಾಗಿ ಭಾಗವಹಿಸಿದ್ದರು. ಶೈಕ್ಷಣಿಕ ಮತ್ತು ಸಾಮಾಜಿಕ ಕ್ಷೇತ್ರದಲ್ಲಿ ತಮ್ಮ ಸೇವೆಯನ್ನು ಸಲ್ಲಿಸಿರುತ್ತಾರೆ.

ನಿಧನ ಹೊಂದಿದ ಸದಸ್ಯರ ಗೌರವದ ಅಂಗವಾಗಿ ಮಾನ್ಯ ಸದಸ್ಯರುಗಳು ಒಂದು ನಿಮಿಷ ಎದ್ದು ನಿಂತು ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

ಈ ಸಭೆಯಲ್ಲಿ ಅಂಗೀಕರಿಸಿದ ಸಂತಾಪ ಸೂಚನಾ ನಿರ್ಣಯವನ್ನು ಅಗಲಿದ ಸದಸ್ಯರ ಕುಟುಂಬದವರಿಗೆ ಕಳುಹಿಸಿಕೊಡಲಾಗುವುದು.

(ಸಭೆಯು ಎದ್ದು ಅಗಲಿದ ಸದಸ್ಯರ ಗೌರವಾರ್ಥವಾಗಿ ಒಂದು ನಿಮಿಷ ಮೌನವನ್ನಾಚರಿಸಿತು)

ಸದಸ್ಯರ ಗೈರು ಹಾಜರಿ

(೧) ಶ್ರೀಮತಿ ಶಕುಂತಲ ಟಿ. ಚೌಗಲೆಯಂವರು ಗೈರುಹಾಜರಾಗಲು ಸಭೆಯ ಅನುಮತಿ ಬಗ್ಗೆ

ಅಧ್ಯಕ್ಷರು.—ಮಾನ್ಯ ವಿಧಾನ ಸಭಾ ಸದಸ್ಯರಾದ ಶ್ರೀಮತಿ ಶಕುಂತಲ ಟಿ. ಚೌಗಲೆಯವರು ಅನಾರೋಗ್ಯದ ನಿಮಿತ್ತವಾಗಿ ದಿನಾಂಕ ೨-೩-೧೯೮೭ ರಿಂದ ೨೦-೩-೧೯೮೭ರ ವರೆಗೆ ವಿಧಾನ ಸಭೆಯ ಉಪವೇಶನಗಳಿಗೆ ಗೈರು ಹಾಜರಾಗಲು ಅನುಮತಿಯನ್ನು ಕೋರಿ ಪತ್ರ ಬರೆದಿರುತ್ತಾರೆ. ''ಆದ್ದರಿಂದ ಸದರಿ ಮಾನ್ಯ ಸದಸ್ಯರಿಗೆ ಗೈರು ಹಾಜರಾಗಲು ಸಭೆ ಅನುಮತಿ ನೀಡಬಹುದೇ''

(ಯಾವ ಸದಸ್ಯರೂ ವಿರೋಧ ವ್ಯಕ್ತಪಡಿಸಲಿಲ್ಲ)

ಅಧ್ಯಕ್ಷರು.— ಮಾನ್ಯ ಸದಸ್ಯರ ಗೈರು ಹಾಜರಿಗೆ ಅನುಮತಿಯನ್ನು ನೀಡಲಾಯಿತು.